ಶ್ರೀ ಎ. ಆರ್. ಬದರಿನಾರಾಯಣ.—1970ನೇ ಇಸವಿಯವರೆಗೆ ಯಾರಿಗಾದರೂ ಒಂದು ವರ್ಷಕ್ಕೆ ಮೇಲ್ಪಟ್ಟು ಸರ್ವಿಸ್ ಆಗಿದ್ದರೆ, ಅಂಥ ಲೋಕಲ್ ಕ್ಯಾಂಡಿಡೇಟ್ಸ್‌ಗೆ ಕನ್‌ಫರ್ಮ್ ಮಾಡಿದೆ. ಅದು ಬಿಟ್ಟು ಬಂದವರಿಗೆಲ್ಲಾ ಕನ್‌ಫರ್ಮ್ ಮಾಡಿದರೆ, ಬೇರೆ ಕಡೆಯಿಂದ ಅದಕ್ಕೆ ಒಬ್ಜೆಕ್ಷನ್ಸ್ ಬರುತ್ತವೆ. There will be objection on the other side saying that the Public Service Commission Rules are flouted and the recruitment rules are flouted. ಆದ್ದರಿಂದ ಆದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಈ ರೀತಿ ಮಾಡುವುದರಿಂದ ಅವರಿಗೆ ಏಜ್ ಬಾರ್ ಆಗಿ ಪ್ರೊಮೋಷನ್ಸಿಗೆ ತೊಂದರೆಯಾಗುತ್ತದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಆರ್. ಬದರಿನಾರಾಯಣ.—ಅದನ್ನೆಲ್ಲಾ ಯೋಚನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್. ಈ ಲೋಕಲ್ ಕ್ಯಾಂಡಿಡೇಟ್ಸ್ ಪ್ರಶ್ನೆ ಹಿಂದೆಯೂ ಬಂದಿತ್ತು. ಸುಮಾರು ಒಂದು ವರ್ಷಕ್ಕಿಂತ ಮೇಲ್ಪಟ್ಟು ಸರ್ವಿಸ್ ಮಾಡಿದರೆ, ಅಂಥವರನ್ನು ಪರ್ಮನೆಂಟ್ ಮಾಡುವುದಕ್ಕೆ ನಿಮಗೆ ಹಕ್ಕು ಇಲ್ಲವೇ; ಮತ್ತು ಹಕ್ಕು ಇಲ್ಲದಿದ್ದರೆ ಆ ಹಕ್ಕನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎ. ಆರ್. ಬದರಿನಾರಾಯಣ.—ನಾನು ಮೊದಲೇ ಹೇಳಿದ ಹಾಗೆ 1-10-70ರ ಹಿಂದೆ ಯಾರು ಕೆಲಸದಲ್ಲಿ ಇದ್ದರು ಅಂಥವರನ್ನು ಕನ್‌ಫರ್ಮ್ ಮಾಡುತ್ತೇವೆಂದು ಹೇಳಿದ್ದೇನೆ. ಅದಕ್ಕೆ ಒಳಪಟ್ಟು ಯಾರಾದರೂ ಬಂದರೆ ಅವರನ್ನು ಕನ್‌ಫರ್ಮ್ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ತಮ್ಮ 1970ರ ಆರ್ಡರ್ ಪ್ರಕಾರ ಕ್ವಾಲಿಫಿಕೇಶನ್ ಆಫ್ ವೇಕೆನ್ಸಿ ಮಾಡಿ ಯಾವ್ಯಾವ ವರ್ಗಕ್ಕೆ ಎಷ್ಟೆಷ್ಟು ಕೊಡಬೇಕೆನ್ನುವ ತಕ್ಕಂತಹ ತತ್ವ ಇದೆ. ಆ ತತ್ವವನ್ನು ಅನುಸರಿಸದೆ ಯಾವುದಾದರೂ ಯುನಿಟ್ ಆಫೀಸರ್ಸ್ ಲೋಕಲ್ ಕ್ಯಾಂಡಿಡೇಟ್ಸನ್ನು ನೇಮಕ ಮಾಡಿದ್ದರೆ ಮತ್ತು ಮಾಡುತ್ತಾ ಇದ್ದರೆ, ಅದು ಕ್ರಮಬದ್ಧವಲ್ಲವೆಂದು ಸಾರುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ.—ಹಾಗೆ ಯಾರಾದರೂ ಮಾಡಿದರೆ, ಅದರ ಬಗ್ಗೆ ತಕ್ಕ ಬಂದೋಬಸ್ತು ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಲೋಕಲ್ ಕ್ಯಾಂಡಿಡೇಟ್ಸ್‌ನ್ನು ತೆಗೆದುಕೊಂಡ ಮೇಲೆ ಎಲ್ಲರನ್ನೂ ಕ್ರಮಬದ್ಧ ಗೊಳಿಸಬೇಕೆನ್ನುವ ಅಭಿಪ್ರಾಯವನ್ನು ಒಪ್ಪಿದರೂ ಕೂಡ ಇತ್ತೀಚೆಗೆ ತೆಗೆದುಕೊಂಡ ಅಭ್ಯರ್ಥಿಗಳನ್ನು ಖಾಯಂಗೊಳಿಸುವುದಕ್ಕೆ ಕಷ್ಟವಾಗುತ್ತದೆ. ಇತ್ತೀಚೆಗೆ ಕೆಲವು ಹುದ್ದೆಗಳಿಗೆ ಇಂಟರ್‌ವ್ಯೂ ಮಾಡತಕ್ಕ ಕಾಲದಲ್ಲಿ 1-2-3-4-ವರ್ಷ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡಿರತಕ್ಕ ಅಭ್ಯರ್ಥಿಗಳಿಗೆ ಪ್ರಿಫರೆನ್ಸ್ ಕೊಡುವುದನ್ನು ಪರಿಪಾಲನೆಮಾಡಿಲ್ಲ. ಆದ್ದರಿಂದ ಸರ್ಕಾರದವರು ಎಲ್ಲೆಲ್ಲಿ ಇಂಟರ್ ವ್ಯೂ ಮಾಡುತ್ತಾರೆ, ಅಲ್ಲಿ ಯಾರು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡಿರುತ್ತಾರೆ, ಅಂಥವರಿಗೆ ಪ್ರಾಶಸ್ತ್ಯವನ್ನು ಕೊಡುವಂತೆ ಎಲ್ಲಾ ಇಲಾಖೆಗಳಿಗೂ ಸೂಚನೆಯನ್ನು ಕಳಿಸುತ್ತೀರಾ?

Sri A. R. BADARINARAYANA.—It is a question of policy. It is not as though it is only for the Education Department. The other Departments also will claim the same right. Since it is a question of State policy I cannot assure the Hon'ble Member anything now.

IRRIGATION SCHEMES IN SHIKARIPUR TALUK

45. Sri K. YENKATAPPA (Shikaripur).—

Will the Minister for Public Works and Electricity be pleased to state:—

(*a*) whether any irrigation schemes in Hosur, Talagunda and Udugani hoblies of Shikaripur Taluk are under consideration;

(*b*) if not, whether Government intends to formulate a lift irrigation scheme and implement the same in this area;

(*c*) the stage at which the underground water resources survey work conducted stands at present;

(*d*) whether Government intends to take up this work as a scheme and implement it through World Bank or some other Banks?

Sri H. M. CHANNABASAPPA (Minister for Public Works and Electricity).—

(*a*) No.

(*b*) No.

(*c*) Report is getting ready.

(*d*) Does not arise in view of reply to clause (*c*).

ಶ್ರೀ ಕೆ. ಯೆಂಕಟಪ್ಪ.—ಈ ಮೂರು ಹೋಬಳಿಗಳಲ್ಲಿ ಯೋಜನೆಗಳು ಸಿದ್ಧವಾಗಿಲ್ಲವೆಂದು ಹೇಳಿದ್ದೀರಿ. ಆದರೆ (ಸಿ) ಪ್ರಶ್ನೆಗೆ ಉತ್ತರವಾಗಿ ಭೂಗರ್ಭ ಜಲಾಶಯದ ಸರ್ವೆ ಆಗುತ್ತಿದೆ ಎಂದು ಹೇಳಿದ್ದೀರಿ. ಅಂದರೆ ಜಿಯಲಾಜಿಕಲ್ ಸರ್ವೆ ಆದಮೇಲೆ ಭೂ ಅಭಿವೃದ್ಧಿ ಬ್ಯಾಂಕಿನಿಂದ ಮತ್ತು ವರ್ಲ್ಡ್ ಬ್ಯಾಂಕಿನಿಂದ ಫಿನಾನ್ಸ್ ತೆಗೆದುಕೊಂಡು ಕಾರ್ಯಗತ ಮಾಡುವುದಕ್ಕೆ ಆದೇಶ ಕೊಡುತ್ತೀರಾ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ರಿಪೋರ್ಟ್ ಈಸ್ ಗೆಟಿಂಗ್ ರೆಡಿ ಎಂದು ಹೇಳಿದ್ದೇವೆ. ಅಂದರೆ ವರದಿ ತಯಾರಾಗುತ್ತಾ ಇದೆ ಎಂದು. ಅದು ಇನ್ನೂ ಪೂರ್ತಿಯಾಗಿಲ್ಲ. ಅದು ತಯಾರಾದ ಮೇಲೆ ಅದರ ಯೋಗ್ಯಾಯೋಗ್ಯತೆಯನ್ನು ಪರಿಶೀಲನೆ ಮಾಡಿ, ಎಷ್ಟು ಮಟ್ಟಿಗೆ ಅದನ್ನು ಕಾರ್ಯಗತ ಮಾಡಬಹುದು, ಮತ್ತು ಯಾವ ಪ್ರಮಾಣದಲ್ಲಿ ಮಾಡಬಹುದು ಎಂಬುದನ್ನು ನಿರ್ಧಾರ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಶಿಕಾರಿಪುರ ತಾಲೂಕಿನ ಮುಕ್ಕಾಲು ಭಾಗ ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶವೆಂದು ಸರ್ಕಾರದ ವರದಿಯಲ್ಲೂ ಇದೆ. ಆದ್ದರಿಂದ ಸಾಗರ ತಾಲೂಕಿನ ಅಂಬ್ಲಿಗೋಳ ಪ್ರೊಜೆಕ್ಟಿನ ಎತ್ತರವನ್ನು ಇನ್ನೂ 5-10 ಅಡಿ ಏರಿಸಿದರೆ ಇದರಿಂದ ಶಿಕಾರಿಪುರದ ಹಲವು ಪ್ರದೇಶಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ಮಾಡುವುದಕ್ಕೆ ಸೂಕ್ತ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಬ್ಲಿಗೋಳ ಯೋಜನೆಯಲ್ಲಿ ಹೆಚ್ಚು ನೀರು ನಿಲ್ಲಿಸತಕ್ಕ ವಿಷಯ ಅದು ಪ್ರತ್ಯೇಕವಾದ ಪ್ರಶ್ನೆ. ಬೇರೆ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರಿಸಬಹುದು. ಆದರೆ ಅದರ ಲೆಫ್ಟ್ ಬ್ಯಾಂಕ್ ಕೆನಾಲ್ ಏನಿದೆ ಅಂದರೆ ಕೊಪ್ಪದ ಕೆರೆಯಿಂದ ಮದಗದ ಮ್ಯೆಸೂರು ಕೆರೆಯ ವರೆಗೂ ಲೆಫ್ಟ್ ಬ್ಯಾಂಕನ್ನು ಬಡವಾಣಿ ಮಾಡಿ ನೀರು ಕೊಡಬೇಕೆಂಬ ಯೋಜನೆ ಮಾಡಿದ್ದೇವೆ. ಅದು ಫೀಸಿಬಲ್ ಆಗಿ ಕಾಣುತ್ತದೆ. ಇದಕ್ಕೆ ಎರಡು ಲಕ್ಷ ಚಿಲ್ಲರೆ ಖರ್ಚಾಗುತ್ತದೆ ಎಂದು ಅಂದಾಜು ಬಂದಿದೆ. ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಯೆಂಕಟಪ್ಪ.—ಅಂಬ್ಲಿಗೋಳ ಲೆಫ್ಟ್ ಬ್ಯಾಂಕನ್ನು ಮುಂದುವರಿಸತಕ್ಕಂತಹ ಕಾರ್ಯ ಇವೆ. ಇದಲ್ಲದೆ ಈ ಮೂರು ಹೋಬಳಿಗಳು ಏನಿವೆ ಇವು ಅಭಾವಕ್ಕೆ ಒಳಗಾಗುವ ಪ್ರದೇಶ ಇರುವುದರಿಂದ ಇಲ್ಲಿ ಬೋರ್‌ವೆಲ್ ಸ್ಕೀಂ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಅದರ ಬಗ್ಗೆ ಜಾಗ್ರತೆ ವರದಿ ತರಿಸಿ ಅದನ್ನು ಕಾರ್ಯಗತ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಲೆಫ್ಟ್ ಬ್ಯಾಂಕಿನ ಲೆಫ್ಟ್ ಬಾಗದಲ್ಲಿ ಪರ್ವತ ಶ್ರೇಣಿಗಳ ರುವುದರಿಂದ ಕುಪುದ್ಯತಿ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಬಹಳ ರಾಂಗ್ ರೇಂಜ್ ಹಿಡಿಯುತ್ತದೆ. ಅದರ ಹೈಟ್ 150 ರಿಂದ 300-350 ಅಡಿಯ ವರೆಗೂ ಹೋಗಬೇಕಾಗುತ್ತದೆ. 300 ಅಡಿ ಆ ಕಾಲದಲ್ಲಿ ಫೀಸಿಬಲ್ ಆಗಿಲ್ಲವೆಂದು ಇತ್ತು. ಈಗ ಈ ಏತ ನೀರಾವರಿ ಸ್ವಲ್ಪಮಟ್ಟಿಗೆ ವಿಕಾಲವಾಗಿರುವುದರಿಂದ 300-350 ಅಡಿ ವರೆಗೂ ವಿಸ್ತರಿಸಬಹುದೆಂದು ಕಾಣುತ್ತದೆ. ಅದನ್ನು ಹೊನರ್ದಾಗಿ ಪರಿಶೀಲನೆ ಮಾಡಿ ಬೆಟ್ಟದ ಗುಡ್ಡದ ಆಚೆ ನೀರು ಕೊಡುವುದು ಸಾಧ್ಯವೇ ಎಂಬುದನ್ನು ಯೋಜನೆ ಮಾಡುತ್ತೇವೆ.

RATIO OF STAFF ON T.B. BOARD

59. Sri B. SATHYANARAYANA SINGH (Hospet).—

Will the Minister of State for Major Irrigation be pleased to state:—

(*a*) the reasons for constituting the Tungabhadra Board;

(*b*) whether it is a fact that the Secretary, Tungabhadra Board is the only person who represents Government of India at Tungabhadra Dam Head Works;

(*c*) whether any staff ratio was agreed to between Andhra and Mysore States with regard to this Board; if so, whether it is maintained at Head Works and in Bellary Division?

Sri H. N. NANJE GOWDA (Minister of State for Major Irrigation).—

(*a*) The Board is constituted by the Government of India under the provisions of the Andhra State Act, 1953, for the purpose of completion of the Tungabhadra Project and its operation and maintenance.

(*b*) The Secretary of the Board does not represent the Government of India on the Board.

(*c*) The Tungabhadra Board on the Irrigation side has tentatively fixed the staff ratio as 50:50 between Andhra Pradesh and Mysore in respect of Class III posts, *i.e*, Technical and Ministerial staff. The Board has also decided that in case one of the States is not in position to depute, the vacancy should be filled up from the other participating States.

This is being maintained at Head Works and in Bellary District but where there is delay in getting the candidates from the participating States against their quota in respect of the Board's request available candidates are being utilised as a stop gap arrangement in the interest of the works till the candidates from the respective States are posted against their quota.